# ಜಿಲ್ಲಾ ಪಂಚಾಯತ ರಾಯಚೂರು.

ಸಂ:ಜಿಪಂರಾ:ಗ್ರಾನೀಸ:ಆಂಮ:2007-08 ದಿನಾಂಕ: 23-01-2008

## ಆದೇಶ.

**ವಿಷಯ** : 2007-08 ನೇ ಸಾಲಿನ ಗ್ರಾಮೀಣ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡುವ ಬಗ್ಗೆ.

**ಉಲ್ಲೇಖ**: 1) ಸರ್ಕಾರದ ಪತ್ರ ಸಂ:ಗ್ರಾಅಪ 2/3 ಗ್ರಾನೀಸ (1) 07 ದಿನಾಂಕ:27-11-2007.
2)ಕಾರ್ಯ ಪಾಲಕ ಅಭಿಯಂತರು, ಜಿಲ್ಲಾ ಪಂಚಾಯಿತಿ ಇಂಜಿನೀಯರಿಂಗ ವಿಭಾಗ ರಾಯಚೂರು ಅವರ ಪತ್ರ ಸಂ:ಕಾನಿಅ/ಪಂರಾಇಂ/ರಾವಿ/ಕಿ.ಇಂ.-2/2007-08 ದಿನಾಂಕ:16-1-2008.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ 2007-08 ನೇ ಸಾಲಿಗೆ ಜಿಲ್ಲೆಯ ಗ್ರಾಮೀಣ ಕುಡಿಯುವ ನೀರಿನ ಕ್ರಿಯಾ ಯೋಜನೆಯನ್ನು ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲಾಗಿತ್ತು. ಉಲ್ಲೇಖ (1)ರ ಪತ್ರದ ಮೂಲಕ ಸರ್ಕಾರವು ಈ ಕ್ರಿಯಾ ಯೋಜನೆಗೆ ಮಂಜೂರಾತಿಯನ್ನು ನೀಡಿರುತ್ತದೆ. ಅನುಮೋದಿತ ಕ್ರಿಯಾ ಯೋಜನೆಯಂತೆ ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಉಲ್ಲೇಖ (2) ರ ಪತ್ರದ ಮೂಲಕ ಕೆಳಕಾಣಿಸಿದ ಕುಡಿಯುವ ನೀರಿನ ಕಾಮಗಾರಿಗಳ ಅಂದಾಜು ಪತ್ರಿಕೆಗಳ ನ್ಯೂನತೆಗಳನ್ನು ಸರಿಪಡಿಸಿ ಸಲ್ಲಿಸುತ್ತಾ ಆಡಳಿತಾತ್ಮಕ ಮಂಜೂರಾತಿ ಕೋರಿರುತ್ತಾರೆ.

ಕಾರ್ಯಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಅವರು ಸಲ್ಲಿಸಿದ ಅಂದಾಜು ಪಟ್ಟಿಗಳನ್ನು ಪರಿಶೀಲಿಸಲಾಗಿ, ಎಲ್ಲಾ ಕಾಮಗಾರಿಗಳು 2007-08 ನೇ ಸಾಲಿನ ಅನುಮೋದಿತ ಕ್ರಿಯಾ ಯೋಜನೆಯಲ್ಲಿ ಸೇರಿರುತ್ತವೆ. ಆದ್ದರಿಂದ ಕೆಳಕಾಣಿಸಿದ ಷರತ್ತಿಗೊಳಪಟ್ಟು ಈ ಅಂದಾಜು ಪತ್ರಿಕೆಗಳಿಗೆ ಕ್ರಿಯಾ ಯೋಜನೆಯಲ್ಲಿ 2007-08 ನೇ ಸಾಲಿಗೆ ನಿಗದಿ ಪಡಿಸಿದ ಮೊತ್ತಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

| ಕ್ರ. ಸಂ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ. ಲಕ್ಷದಲ್ಲಿ) | 2007-08 ನೇ ಸಾಲಿನ ಅನುದಾನ (ರೂ.ಲಕ್ಷ ದಲ್ಲಿ) | ಕ್ರಿ.ಯೋ. ಯಲ್ಲಿನ ಪುಟ ಸಂ. ಹಾಗೂ ಕ್ರ.ಸಂ. |
|---|---|---|---|---|
| **ತಾಲೂಕ : ರಾಯಚೂರು ರಾಜ್ಯ ವಲಯ (MNP)** | | | | |
| **ಕೇಂದ್ರ ವಲಯ (ARWSP)** | | | | |
| 1 | ಪುರತಿಪ್ಲಿ ಗ್ರಾಮದಲ್ಲಿ ಪಿಟವೆಲ್ ಹಾಗೂ ಕೊ.ನೀ.ಸ. ಯೋಜನೆ (ಪಿಟ್ ವೆಲ್, ಪೈ.ಲೈನ, ಪಂ.ಹೌಸ, ಪಂ.ಮಷಿನರಿ ಹಾಗೂ 4-ಸ್ಟಾಂಡ ಪೊಸ್ಟ ಒದಗಿಸುವುದು) | 13.00 | 5.00 | 19/1 |
| 2 | ಆಲ್ಕೂರು ಗ್ರಾಮದಲ್ಲಿ ಕೊ.ನೀ.ಸ. ಯೋಜನೆ ( 50000 ಲೀಟರ OHT, ಪೈ.ಲೈನ, ಪಂ.ಹೌಸ, ಪಂ.ಮಷಿನರಿ ಹಾಗೂ 8-ಸ್ಟಾಂಡ ಪೊಸ್ಟ ಒದಗಿಸುವುದು) | 20.25 | 5.00 | 20/1 |
| **ತಾಲೂಕ : ಮಾನವಿ ರಾಜ್ಯ ವಲಯ (MNP)** | | | | |
| 3 | ರಾಜೊಳ್ಳಿ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ(1,00,000 ಲೀಟರ OHT, 2-ಕೊ.ಭಾವಿ, ಪೈ.ಲೈನ, ಪಂ.ಹೌಸ, ಪಂ.ಮಷಿನರಿ ಹಾಗೂ 5-ಸ್ಟಾಂಡ ಪೊಸ್ಟ ಒದಗಿಸುವುದು) | 12.00 | 7.10 | 22/4 |
| 4 | ಡೊಣಮರಡಿ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ (1,00,000 ಲೀಟರ OHT, 1-ಕೊ.ಭಾವಿ, ಪೈ.ಲೈನ, ಪಂ. ಹೌಸ, ಪಂ.ಮಷಿನರಿ ಹಾಗೂ 5-ಸ್ಟಾಂಡ ಪೊಸ್ಟ ಒದಗಿಸುವುದು) | 13.00 | 8.00 | 22/7 |
| **ತಾಲೂಕ : ಲಿಂಗಸುಗೂರು ಕೇಂದ್ರ ವಲಯ (ARWSP)** | | | | |
| 5 | ಐದಭಾವಿ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ (50,000 ಲೀಟರ OHT, ಕೊ.ಭಾವಿ ರಿಚಾರ್ಜಿಂಗ, ಪೈ.ಲೈನ, ಪಂ. ಹೌಸ, ಪಂ.ಮಷಿನರಿ ಹಾಗೂ 3-ಸ್ಟಾಂಡ ಪೊಸ್ಟ ಒದಗಿಸುವುದು) | 12.25 | 5.00 | 29/1 |
| **ತಾಲೂಕ : ಸಿಂಧನೂರು ರಾಜ್ಯ ವಲಯ (MNP)** | | | | |
| 6 | ಹಂಚಿನಾಳ ಕ್ಯಾಂಪಿನಲ್ಲಿ ಕೊ.ನೀ.ಸ. ಯೋಜನೆ (1.00 ಲಕ್ಷ ಲೀಟರ OHT, ಪಿಟ್ ವೆಲ್, ಪೈ.ಲೈನ,ಒದಗಿಸುವುದು) | 18.00 | 13.70 | 30/1 |
| **ಕೇಂದ್ರ ವಲಯ (ARWSP)** | | | | |
| 7 | ಮಾಟೂರು ಗ್ರಾಮದಲ್ಲಿ ಕೊ.ನೀ.ಸ. ಯೋಜನೆ | 12.00 | 6.00 | 30/1 |

| | | | | |
|---|---|---|---|---|
| | (75,000 ಲೀಟರ OHT, ಪೈ.ಲೈನ, ಪಂ.ಹೌಸ, ಪಂ.ಮಷಿನರಿ ಒದಗಿಸುವುದು) | | | |
| 8 | ಬೂದಿಹಾಳ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ (Pitwell,1,00,000 ಲೀಟರ OHT, ಪೈ.ಲೈನ, ಪಂ.ಹೌಸ, ಪಂ.ಮಷಿನರಿ ಹಾಗೂ 8-ಸ್ಟಾಂಡ ಪೋಸ್ಟ ಒದಗಿಸುವುದು) | 9.00 | 4.00 | 30/6 |
| **ತಾಲೂಕ : ದೇವದುರ್ಗ ರಾಜ್ಯ ವಲಯ (MNP)** | | | | |
| 9 | ಮಸರಕಲ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ ಅಭಿವೃದ್ಧಿ (1,00,000 ಲೀಟರ OHT ಒದಗಿಸುವುದು) | 8.00 | 4.30 | 24/1 |
| 10 | ಸುಂಕೇಶ್ವರಾಳ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ (50,000 ಲೀಟರ OHT, ಪೈ.ಲೈನ, ಪಂ.ಹೌಸ, ಪಂ.ಮಷಿನರಿ ಒದಗಿಸುವುದು) | 10.00 | 5.70 | 24/4 |
| 11 | ಬೊಮ್ಮನಾಳ ಗ್ರಾಮದಲ್ಲಿ ಕೊ.ನೀ.ಸ. ಯೋಜನೆ (50,000 ಲೀಟರ OHT, 1-ಕೊ.ಭಾವಿ, ಪೈ.ಲೈನ, ಪಂ.ಹೌಸ, ಪಂ.ಮಷಿನರಿ ಒದಗಿಸುವುದು) | 13.00 | 6.00 | 24/8 |
| **DDP** | | | | |
| 12 | ಗಬ್ಬೂರು ಗ್ರಾಮದಲ್ಲಿ ಕೊ.ನೀ. ಸ. ಯೋಜನೆ (50,000 ಲೀಟರ OHT, recharging structure, 1-ಕೊ.ಭಾವಿ, ಪೈ.ಲೈನ, ಪಂ.ಹೌಸ, ಪಂ.ಮಷಿನರಿ ಹಾಗೂ 5-ಸ್ಟಾಂಡ ಪೋಸ್ಟ ಒದಗಿಸುವುದು) | 22.50 | 20.00 | 25/4 |

**ಷರತ್ತುಗಳು:**

1. ಈ ಯೋಜನೆಯಲ್ಲಿ ತೆಗೆದುಕೊಂಡಿರುವ ಕಾಮಗಾರಿಗಳನ್ನು ಬೇರೆ ಯಾವುದೇ ಯೋಜನೆಯಲ್ಲಿ ತೆಗೆದುಕೊಂಡಿಲ್ಲವೆಂದು ದೃಢೀಕರಿಸುವುದು.
2. ಈ ಕಾಮಗಾರಿಗಳನ್ನು 2007-08 ನೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಬೇಕು. ಯಾವುದೇ ಕಾರಣಕ್ಕೂ ಈ ಕಾಮಗಾರಿಗಳು ಮುಂದಿನ ವರ್ಷಕ್ಕೆ ಮುಂದುವರೆದ ಕಾಮಗಾರಿಗಳಾಗದಂತೆ ನೋಡಿಕೊಳ್ಳತಕ್ಕದ್ದು.
3. ಜಿಲ್ಲಾ ಪಂಚಾಯತ ಕಛೇರಿಯಲ್ಲಿ ಕಾಮಗಾರಿಗಳ ಗಣಕೀಕೃತ ಮಾಹಿತಿಯನ್ನು update ಮಾಡಲು ಕಾಮಗಾರಿಯನ್ನು ಪ್ರಾರಂಭಿಸಿದ ದಿನಾಂಕ ಹಾಗೂ ಪೂರ್ಣಗೊಳಿಸಿದ ದಿನಾಂಕ ಅಥವಾ ಪೂರ್ಣಗೊಳಿಸಬಹುದಾದ ದಿನಾಂಕ ಮತ್ತು ಇತರೆ ಮಾಹಿತಿಯನ್ನು ಈ ಕಾರ್ಯಾಲಯದಿಂದ ನೀಡಿದ ನಮೂನೆಯಲ್ಲಿ ಒದಗಿಸಲು ಸೂಚಿಸಿದೆ. ಹಾಗೂ ಹಿಂದಿನ ಮಾಹೆಯಲ್ಲಿನ ವೆಚ್ಚದ ವಿವಿರಗಳನ್ನು ಪ್ರತಿ ತಿಂಗಳು 5 ನೇ ದಿನಾಂಕದೊಳಗೆ ಈ ಕಛೇರಿಗೆ ಸಲ್ಲಿಸುವುದು.
4. ಕಾಮಗಾರಿಯ ಅನುಷ್ಠಾನ ಮತ್ತು ಆರ್ಥಿಕ ಮತ್ತು ಭೌತಿಕ ಪ್ರಗತಿಯ ಮಾಹಿತಿಯನ್ನು ಸಂಬಂದಿಸಿದ ಗ್ರಾಮ ಪಂಚಾಯತ ಗೆ ಒದಗಿಸುವುದು.
5. ವೆಚ್ಚವನ್ನು ಸಂಬಂದಿಸಿದ ಯೋಜನೆಯ ಲೆಕ್ಕ ಶೀರ್ಷಿಕೆಯಡಿ ಭರಿಸುವುದು.
6. ಅನುಬಂಧದಲ್ಲಿ ಲಗತ್ತಿಸಿರುವ ನ್ಯೂನತೆಗಳನ್ನು ಸರಿಪಡಿಸಿ ಕಾಮಗಾರಿ ಅನುಷ್ಠಾನಗೊಳಿಸತಕ್ಕದ್ದು ಹಾಗು ಸರಿಪಡಿಸಿದ ಅಂದಾಜು ಪತ್ರಿಕೆಯ ಪ್ರತಿ ಈ ಕಾರ್ಯಾಲಯಕ್ಕೆ ಒದಗಿಸುವುದು.

(ಎಸ್.ಅನೀಸ್ ಸಿರಾಜ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು
ಜಿಲ್ಲಾ ಪಂಚಾಯತ ರಾಯಚೂರು.

**ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ ಇವರಿಗೆ ಕಳುಹಿಸಿದೆ.**

1. ಮಾನ್ಯ ಅಧ್ಯಕ್ಷರು/ಉಪಾಧ್ಯಕ್ಷರು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
2. ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ರಾಯಚೂರು ರವರ ಆಪ್ತ ಶಾಖೆಗೆ.
3. ಕಾರ್ಯ ಪಾಲಕ ಅಭಿಯಂತರು, ಪಂಚಾಯತ ರಾಜ್ ಇಂಜಿನೀಯರಿಂಗ ವಿಭಾಗ ರಾಯಚೂರು ಇವರಿಗೆ ಆಡಳಿತ ಮಂಜೂರಾತಿ ನೀಡಿದ ಅಂದಾಜು ಪಟ್ಟಿಗಳನ್ನು ಲಗತ್ತಿಸಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರು ಪಂಚಾಯತ ರಾಜ್ ಇಂಜಿನೀಯರಿಂಗ ಉಪವಿಭಾಗ ದೇವದುರ್ಗ/ ಮಾನಿ/ಲಿಂಗಸೂರು/ಸಿಂಧನೂರು ಮತ್ತು ರಾಯಚೂರು.
5. ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ , ದೇವದುರ್ಗ/ ಮಾನಿ/ಲಿಂಗಸೂರು/ ಸಿಂಧನೂರು./ ರಾಯಚೂರು.
6. ಅದ್ಯಕ್ಷರು / ಕಾರ್ಯದರ್ಶಿಗಳು. . . . . . . .ಗ್ರಾಮ ಪಂಚಾಯತ,____________ ತಾಲ್ಲೂಕು ಇವರಿಗೆ ರವಾನಿಸುತ್ತಾ ಕಾಮಗಾರಿಯ ಆಡಳಿತಾತ್ಮಕ ಮಂಜೂರಾತಿಯ ಬಗ್ಗೆ ಗ್ರಾಮ ಪಂಚಾಯತ ಮಾಸಿಕ ಸಭೆಯಲ್ಲಿ ಓದಿ ದೃಢೀಕರಿಸುವುದು.
7. ಜಿಲ್ಲಾ ಪಂಚಾಯತ ರಾಯಚೂರು ಸೂಚನಾ ಫಲಕಕ್ಕೆ.
8. ಕಛೇರಿ ಪ್ರತಿ.